**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ದಿನಾಂಕಃ-09.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ**
**ಶ್ರೀ .ಸಿ.ಬಿ.ಹೆಚ್. ರವರಿಂದಃ**

1ನೇ ಪ್ರತಿವಾದಿ ನನ್ನ ಗಂಡ ಎಂದರೆ ಸರಿ. 1ನೇ ಪ್ರತಿವಾದಿಯು ಈಗ ಮರಣಹೊಂದಿರುತ್ತಾರೆ ಎಂದರೆ ಸರಿ. ಪ್ರತಿವಾದಿ 1(ಎ) ಮತ್ತು 1(ಬಿ) ರವರು ನನ್ನ ಮಕ್ಕಳು ಎಂದರೆ ಸರಿ. ನಾನು ಮತ್ತು ನನ್ನ ಗಂಡನಾದ 1 ನೇ ಪ್ರತಿವಾದಿಯು ಸೇರಿ ವಾದಿಗೆ ದಿಃ 15-03-2012 ರಂದು ನೊಂದಾಯಿತ ಕ್ರಯ ಕರಾರುಪತ್ರವನ್ನು ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನಿ.ಪಿ.1 ರ ಕ್ರಯ ಕರಾರುಪತ್ರಕ್ಕೆ ನಾನು ಸಹಿ ಮಾಡಿಕೊಟ್ಟಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.1 ರಂತೆ ಕ್ರಯ ಕರಾರುಪತ್ರ ಮಾಡುವಾಗ ಸಾಕ್ಷಿದಾರರ ಸಮಕ್ಷಮ ವಾದಿಯಿಂದ ಕ್ರಯಕರಾರಿನ ಸಂಪೂರ್ಣ ಹಣವಾದ ರೂ.1,92,500/- ಗಳನ್ನು ನಾನು ಮತ್ತು 1ನೇ ಪ್ರತಿವಾದಿಯ ನನ್ನ ಗಂಡ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.1 ರ ಕ್ರಯ ಕರಾರುಪತ್ರವನ್ನು ನಾವು ಮಾಡಿಕೊಡುವಾಗ ಎಲ್ಲಾ ದಾಖಲಾತಿಗಳನ್ನು ಹೊಂದಿಸಿಕೊಳ್ಳಲು ಸುಮಾರು 18 ತಿಂಗಳುಗಳ ಕಾಲ ಸಮಯಾವಕಾಶವನ್ನು ಪಡೆದುಕೊಂಡಿದ್ದೆವು ಎಂದರೆ ಸರಿಯಲ್ಲ. ನಿ.ಪಿ.1 ರ ಕ್ರಯ ಕರಾರುಪತ್ರವನ್ನು ಮಾಡಿಕೊಟ್ಟ ನಂತರ ಕ್ರಯಪತ್ರವನ್ನು ಮಾಡಿಕೊಡುವ ಸಂದರ್ಭದಲ್ಲಿ ದಾವಾಸ್ವತ್ತನ್ನು ವಾದಿಗೆ ಸ್ವಾಧೀನಕ್ಕೆ ನೀಡುವುದಾಗಿ ಒಪ್ಪಿದ್ದೆವು ಎಂದರೆ ಸರಿಯಲ್ಲ. ವಾದಿಯು ಸಾಕಷ್ಟು ಬಾರಿ ನಮ್ಮ ಬಳಿ ಬಂದು ನಿ.ಪಿ.1 ರಂತೆ ಕ್ರಯಪತ್ರವನ್ನು ಮಾಡಿಕೊಡುವಂತೆ ನಮ್ಮನ್ನು ಕೇಳಿದ್ದರು ಎಂದರೆ ಸಾಕ್ಷಿಯು ವಾದಿಯು ನಮ್ಮ ಮನೆಯ ಬಳಿ ಬಂದಿರುವುದಿಲ್ಲ.ಎಂದು ನುಡಿಯುತ್ತಾರೆ.

ಕ್ರಯಪತ್ರ ಮಾಡಿಕೊಡುವಾಗ 1 ನೇ ಪ್ರತಿವಾದಿ ಮತ್ತು ನಾನು ನಮ್ಮ ಮಕ್ಕಳೊಂದಿಗೆ ಬಂದು ಉಪನೊಂದಣಾದಿಕಾರಿಗಳ ಕಚೇರಿಯಲ್ಲಿ ದಾವಾಸ್ವತ್ತನ್ನು ವಾದಿಗೆ ಕ್ರಯ ಮಾಡಿಕೊಡುವುದಾಗಿಯೂ ಸಹ ತಿಳಿಸಿದ್ದೆವು ಎಂದರೆ ಸರಿಯಲ್ಲ. ವಾದಿಯು ನಿ.ಪಿ.1 ರ ಕ್ರಯ ಕರಾರಿನಂತೆ ನಡೆದುಕೊಳ್ಳಲು ಸದಾ ಸಿದ್ದ ಮತ್ತು ಇಚ್ಛೆಯುಳ್ಳವರಾಗಿದ್ದು ನಮ್ಮ ಬಳಿ ಬಂದು ಕ್ರಯಪತ್ರ ಮಾಡಿಕೊಡುವಂತೆ ಕೇಳಿಕೊಂಡಿದ್ದರು ಎಂದರೆ ಸಾಕ್ಷಿಯು ವಾದಿಯು ನಮ್ಮ ಮನೆಯ ಬಳಿ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಈ ವಿಚಾರವಾಗಿ ವಾದಿಯು ತನ್ನ ವಕೀಲರ ಮೂಲಕ ನಿ.ಪಿ.2 ರಂತೆ ನಮಗೆ ಕಾನೂನು ತಿಳುವಳಿಕೆ ಪತ್ರವನ್ನು ಸಹ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಕಾನೂನು ತಿಳುವಳಿಕೆ ಪತ್ರವು ನಮಗೆ ತಲುಪಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ.5 ರಂತೆ ನನಗೆ ಕಾನೂನು ತಿಳುವಳಿಕೆ ಪತ್ರ ಜಾರಿಯಾಗಿದ್ದರೂ ಸಹ ನನಗೆ ಕಾನೂನು ತಿಳುವಳಿಕೆ ಪತ್ರ ಜಾರಿಯಾಗಿರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.2 ರಂತೆ ಕಾನೂನು ತಿಳುವಳಿಕೆ ಪತ್ರವನ್ನು ನಾನು ಸ್ವೀಕರಿಸಿಕೊಂಡು ಅದಕ್ಕೆ ಮರುಉತ್ತರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.1 ರ ಕ್ರಯ ಕರಾರುಪತ್ರದಂತೆ ನಡೆದುಕೊಳ್ಳುವಂತೆ ನೋಟೀಸ್ ನೀಡಿದ ನಂತರವೂ ನಮ್ಮ ಬಳಿ ಬಂದು ಕ್ರಯಪತ್ರ ಮಾಡಿಕೊಡುವಂತೆ ಕೇಳಿಕೊಂಡಿದ್ದರು ಎಂದರೆ ಸಾಕ್ಷಿಯು ಅವರು ಬಂದಾಗ ನಾವು ಮಾಡಿಕೊಡುವುದಿಲ್ಲ ಎಂದು ಹೇಳಿ ಕಳುಹಿಸಿರುತ್ತೇವೆ ಎಂದು ನುಡಿಯುತ್ತಾರೆ. ನಾವು ನಿ.ಪಿ.1 ರಂತೆ ಕ್ರಯಪತ್ರವನ್ನು ಮಾಡಿಕೊಡುವಾಗ ದಾವಾಸ್ವತ್ತಿನ ಸ.ನಂಃ 41/3 ಎಂದು ಇತ್ತು ಎಂದರೆ ಸರಿ . ಈಗ ದಾವಾಸ್ವತ್ತಿನ ಸ.ನಂಃ ಹೊಸದಾಗಿ 41/10 ಎಂದು ಬದಲಾವಣೆಯಾಗಿರುತ್ತದೆ ಎಂದರೆ ಸರಿ. ವಾದಿಗೆ ನಿ.ಪಿ.1 ರಂತೆ ಕ್ರಯ ಕರಾರುಪತ್ರವನ್ನು ಮಾಡಿಕೊಟ್ಟಿದ್ದು ಆದರೆ ನಾನು ನಮ್ಮ ಪ್ರತಿವಾದ ಪತ್ರದಲ್ಲಿ ವಾದಿಯಿಂದ ಕಾನೂನು ಅವಶ್ಯಕತೆಗಳಿಗಾಗಿ ಸಾಲವನ್ನು ಪಡೆದುಕೊಂಡಿದ್ದೆವು ಮಾರಾಟ ಮಾಡುವುದ್ದಕ್ಕಲ್ಲ ಎಂದು ಸುಳ್ಳು ನುಡಿಯುುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ದಾವೆಯ ಸತ್ಯಾಂಶಗಳು ನನಗೆ ತಿಳಿದಿದ್ದರೂ ಸಹ ದಾವಾಸ್ವತ್ತನ್ನು ವಾದಿಗೆ ಕ್ರಯ ಪತ್ರವನ್ನು ಮಾಡಿಕೊಡುವುದರಿಂದ ತಪ್ಪಿಸಿಕೊಳ್ಳಲು ನ್ಯಾಯಾಲಯದಲ್ಲಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**
**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**